ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಆಗು ನೀ ಅನಿಕೇತನ
BE BOUNDLESS
BENGALURU CITY UNIVERSITY
Office of the Registrar(Evaluation), Central College Campus, Dr. B.R AmbedkarVeedhi, Bengaluru – 560 001.E-mail: registrarevlubcu@gmail.com, Ph.No.080-22295559

ಸಂಖ್ಯೆ:ಬಿ.ಸಿಯು/01/ಪರೀಕ್ಷಾ/2020-21/1645 ದಿನಾಂಕ:06.09.2021

**ವಿಷಯ: ಸರ್ಕಾರದ ಆದೇಶ ದಿನಾಂಕ 23.07.2021ರಲ್ಲಿ ಸೂಚಿಸಿರುವ ಮಾನದಂಡಗಳನ್ನು ಅಳವಡಿಸಿಕೊಂಡು ಮಧ್ಯಂತರ ಸೆಮೆಸ್ಟರುಗಳ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ತೇರ್ಗಡೆ ಮಾಡುವ ಸಂಬಂಧ ನಿಯಮಾವಳಿಗಳನ್ನು ಅನುಸರಿಸುವ ಬಗ್ಗೆ.**

**ಉಲ್ಲೇಖ:** 1. .ಸರ್ಕಾರದಆದೇಶ ಸಂಖ್ಯೆED/197/UNE/2021 ದಿನಾಂಕ:10.07.2020.
2. ಸರ್ಕಾರದಆದೇಶ ಸಂಖ್ಯೆED/204/UNE/2021 ದಿನಾಂಕ:23.07.2021.
3. ವಿಶ್ವವಿದ್ಯಾಲಯದಅಧಿಸೂಚನೆ ಸಂಖ್ಯೆ: ಬಿಸಿಯು/01/ಪರೀಕ್ಷಾ/ಅಧಿಸೂಚನೆ/2020-21/674 ದಿನಾಂಕ 13.08.2020.
4. ಸಮಿತಿಯ ವರದಿ ದಿನಾಂಕ 25.08.2020.
5. 13ನೇ ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ 13.08.2021.
6. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 03.09.2021

********

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21ನೇ ಸಾಲಿನ UG ಮತ್ತು PG ಕೋರ್ಸುಗಳ ಪರೀಕ್ಷೆಗಳನ್ನು ನಡೆಸುವ ಸಂಬಂಧ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗ (UGC), ನವದೆಯಲಿಯ ನಿರ್ದೇಶನ ಮತ್ತು ಉನ್ನತ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರವು ಸುತ್ತೋಲೆಯನ್ನು ಹೊರಡಿಸಿವೆ.

ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಿರುವಂತೆ UG 2 ಮತ್ತು 4ನೇ ಸೆಮಿಸ್ಟರ್ ಮತ್ತು PG 2 ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸದೆ ಹಿಂದಿನ ಸೆಮೆಸ್ಟರಿನ ಅಂಕಗಳ ಸರಾಸರಿ ಮತ್ತು ಪ್ರಸ್ತುತ ಸೆಮೆಸ್ಟರಿನ ಆಂತರಿಕ ಅಂಕಗಳ ಸರಾಸರಿಯನ್ನು ಆಧರಿಸಿ ಫಲಿತಾಂಶವನ್ನು ಪ್ರಕಟಿಸಬೇಕಿರುತ್ತದೆ. ಈ ಸಂಬಂಧ ಸರ್ಕಾರದ ಆದೇಶ ದಿನಾಂಕ 10.07.2020 ರಲ್ಲಿ ಸೂಚಿಸಿರುವ ಮಾನದಂಡಗಳನ್ನು ಅಳವಡಿಸಿಕೊಂಡು ಮಧ್ಯಂತರ ಸೆಮಿಸ್ಟರುಗಳ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ತೇರ್ಗಡೆ ಮಾಡುವ ಸಂಬಂಧ ರಚಿಸಿದ್ದ ಸಮಿತಿಯು ರೂಪಿಸಿರುವ ನಿಯಮಾವಳಿಗಳನ್ನು ದಿನಾಂಕ 11.09.2020ರ ಸಿಂಡಿಕೇಟ್ ಅನುಮೋದಿಸಿರುವ ಅನುಸಾರ 2021-22ರ ಸಾಲಿನ UG 2 ಮತ್ತು 4ನೇ ಸೆಮಿಸ್ಟರ್ ಮತ್ತು PG 2 ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಫಲಿತಾಂಶ ಪ್ರಕ್ರಿಯೆಗಳನ್ನು ಕೈಗೊಳ್ಳಲು ದಿನಾಂಕ 13.08.2021 ರಂದು ನಡೆದ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿರುತ್ತದೆ.

**ಆದೇಶ ಸಂಖ್ಯೆ:ಬೆಂ.ನ.ವಿ/ಪರೀಕ್ಷಾವಿಭಾಗ/01/ಮಧ್ಯಂತರ.ಸೆ.ಪ.ಫ/2021-22** **ದಿನಾಂಕ 06.09.2021**

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ 2021-22 ನೇ ಶೈಕ್ಷಣಿಕ ಸಾಲಿನ ಮಧ್ಯಂತರ ಸೆಮೆಸ್ಟರ್ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಪ್ರಕ್ರಿಯೆಗಳನ್ನು ದಿನಾಂಕ 25.08.2020 ರಂದು ಸಿಂಡಿಕೇಟ್ ಅನುಮೋದಿಸಿರುವ ಮಾನದಂಡಗಳನ್ನು ಅಳವಡಿಸಿಕೊಂಡು ಸ್ನಾತಕ ಕೋರ್ಸುಗಳ ಎರಡು ಮತ್ತು ನಾಲ್ಕನೇ ಸೆಮೆಸ್ಟರ್ ಹಾಗೂ ಸ್ನಾತಕೋತ್ತರ ಕೋರ್ಸುಗಳ ಎರಡನೇ ಸೆಮೆಸ್ಟರ್ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲು ಆದೇಶಿಸಲಾಗಿದೆ.

**ಆದೇಶದ ಮೇರೆಗೆ,**

**ಕುಲಸಚಿವರು(ಮೌಲ್ಯಮಾಪನ)**

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು - 560 001

**ಗೆ,**

ಮೆ. ಲಾಜಿಸಿಸ್, #2549, ಅನುಗ್ರಹ, 7ನೇ ಮುಖ್ಯರಸ್ತೆ, 28 ನೇ ಅಡ್ಡ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560070.

**ಪ್ರತಿಗಳು:**

1. ವಿತ್ತಧಿಕಾರಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಸೆಂಟ್ರಲ್ ಕಾಲೇಜು, ಬೆಂಗಳೂರು.
2. ಕುಲಪತಿಗಳು/ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
3. ವಿಶ್ವವಿದ್ಯಾಲಯದ ವೆಬ್‌ಸೈಟ್ ನಿರ್ವಾಹಕರು ಈ ಸುತ್ತೋಲೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಲು ಕೋರಲಾಗಿದೆ ಮತ್ತು ಸಂಬಂಧಪಟ್ಟ ವಿಭಾಗಗಳಿಗೆ ಹಾಗೂ ಸಂಯೋಜಿತ ಕಾಲೇಜುಗಳ ಪೋರ್ಟಲ್‌ನಲ್ಲಿಯೂ ಸಹ ಅಪ್ಲೋಡ್ ಮಾಡಲು ಕೋರಲಾಗಿದೆ.